ಕೊಳ್ಳುವುದಕ್ಕಾಗುವುದಿಲ್ಲ. ವಿ. ಡಿ. ಪಿ. ಎಸ್. ಮಾಡಿದ್ದೇವೆ, ಅವರಿಗೆ ತರಬೇತಿಯನ್ನು ಕೊಟ್ಟಿದ್ದೇವೆ. ರೈಫಲ್ ಶೂಟಿಂಗ್ ಮಾಡುವ ಬಗ್ಗೆ ಹೆಣ್ಣು ಸೈಕ್ಕಳಿಗೆ ತರಬೇತಿಯನ್ನು ಕೊಟ್ಟಿದ್ದೇವೆ. ನಮ್ಮ ಕೈಲಾದಷ್ಟು ಕೆಲಸ ಮಾಡಿದ್ದೇವೆ. ಜೊತೆಗೆ ಎರಡು ಹೊಸ ಆಂಟೀ ಡಕಾಯಿಟ್ಸ್ ಸ್ಕ್ವಾಡ್ ಮಾಡಿಕೊಂಡಿದ್ದೇವೆ. We are going to press them into service within fifteen days. ಇದನ್ನು ಕೂಡ ಮಾಡುತ್ತಿದ್ದೇವೆ. ನೆಗ್‌ಲೆಟ್ ಮಾಡಿಲ್ಲವೆನ್ನುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಆರ್. ವೆಂಕಟರಾಮಯ್ಯ.— ತಮ್ಮ ವಿವರ ಬೇಕಾಗಿಲ್ಲ, ಡಕಾಯಿತಿಯನ್ನು ಪ್ರಿವೆಂಟ್ ಮಾಡುವುದಕ್ಕೆ ಆಗುತ್ತದೆಯೇ ಇಲ್ಲವೇ ಎಂಬುದನ್ನು ಹೇಳಿ ? ಅದನ್ನು ಹೇಳುವುದನ್ನು ಬಿಟ್ಟು ಕೋಪ ಮಾಡಿಕೊಂಡು ಹೇಳುವುದು ಬೇಡ. ಮಾನ್ಯ ಮಾದೇಗೌಡರು ಸಹ ಅದನ್ನೆ ಹೇಳಿದ್ದಾರೆ. ಪ್ರಿವೆಂಟ್ ಮಾಡುವುದು ನಿಮ್ಮ ಕರ್ತವ್ಯ. ಅದನ್ನು ಬಿಟ್ಟು ನಾವು ಹಾಗೆ ಮಾಡಿದ್ದೇವೆ. ಹೀಗೆ ಮಾಡಿದ್ದೇವೆಂದರೆ ಹೇಗೆ ? ನೀವು ಏನಾದರೂ ಮಾಡಿ. ಜನರಿಗೆ ರಕ್ಷಣೆ ಕೊಡುತ್ತೀರಾ ? ಡಕಾಯಿತಿ ನಡೆಯದಹಾಗೆ ನೋಡಿಕೊಳ್ಳುತ್ತೀರಾ ? ನಿಮ್ಮನ್ನು ಹೊಗಳುವುದು ಬೇಡ, ತೆಗಳುವುದು ಬೇಡ.

ಶ್ರೀ ಆರ್. ಎಲ್. ಜಾಲಪ್ಪ.— ವಸ್ತುಸ್ಥಿತಿಯನ್ನು ಹೇಳುತ್ತಿದ್ದೇನೆ. ಈಗಿರುವ ವ್ಯವಸ್ಥೆಯಲ್ಲಿ ಡಕಾಯಿತಿಯನ್ನು ಪೂರ್ಣ ನಿಲ್ಲಿಸಂವುದಕ್ಕೆ ನನಗಾಗಲೀ, ನನ್ನ ಆಪ್ತನಿಗಾಗಲೀ ಬ್ರಹ್ಮ ಬಂದರೂ ಆಗುವುದಿಲ್ಲ. ಪೋಲೀಸ್‌ನವರೇ ಹೇಳಿದ್ದಾರೆ ಡಕಾಯಿತರನ್ನು ಸಾಯಿಸಿ ಎಂದು. ಡಕಾಯಿತರನ್ನು ಸಾಯಿಸಿದವರಿಗೆ ೨೫ ಸಾವಿರ ರೂಪಾಯಿಗಳ ಬಹುಮಾನ ಕೊಡುತ್ತೇವೆಂದು ಹೇಳಿದ್ದೇವೆ. ನೀವು ಹಳ್ಳಿಗಳಲ್ಲಿ ಜನರಿಗೆ ತರಬೇತಿಯನ್ನು ಕೊಡಿ. That does not mean to say that we are emasculated. Please understand us. We are doing our best.

ಅಧ್ಯಕ್ಷರು.— ಮಾನ್ಯ ರಾಜೂಗೌಡರು ಕಂದಾಯ ಮಂತ್ರಿಗಳ ಗಮನವನ್ನು ಸೆಳೆಯಿರಿ.

ಶ್ರೀ ಎಸ್. ಆರ್. ಬೊಮ್ಮಾಯಿ.— ಈ ಬಗ್ಗೆ ಪೂರ ಮಾಹಿತಿ ಬಂದಿಲ್ಲ. ಎರಡು ದಿವಸ ಬಿಟ್ಟು ಇದನ್ನು ತೆಗೆದುಕೊಳ್ಳೋಣ.

ಶ್ರೀ ಆರ್. ವೆಂಕಟರಾಮಯ್ಯ.— ಮಾನ್ಯ ಅಧ್ಯಕ್ಷರೆ ನಿನ್ನೆ ದಿವಸ ಎನ್. ಜಿ. ಇ. ಎಫ್.ಗೆ ಸಂಬಂಧಪಟ್ಟಹಾಗೆ ಒಂದು ಕಾಲಿಂಗ್ ಅಟೆನ್‌ಷನ್ ಇತ್ತು. ಅದನ್ನು ಇವತ್ತು ತೆಗೆದುಕೊಳ್ಳಬೇಕೆಂದು ಕೇಳುತ್ತೇನೆ.

ಶ್ರೀ ಜೆ. ಎಚ್. ಪಟೇಲ್.— ಅದನ್ನು ತೆಗೆದುಕೊಳ್ಳುವುದಕ್ಕೆ ತಾವು ಪರ್ಮಿಷನ್ ಕೊಟ್ಟರೆ ನಾನು ಉತ್ತರ ಹೇಳುತ್ತೇನೆ.

ಅಧ್ಯಕ್ಷರು.— ಆಗಬಹುದು.

೩) ರಾಜಾಸ್ಥಾನದಲ್ಲಿ ಎನ್. ಜಿ. ಇ. ಎಫ್. ಸಂಸ್ಥೆಯವರು ರೆಕ್ಟಿಫೈಯರ್ ಸ್ಥಾಪಿಸುವ ಸಂದರ್ಭದಲ್ಲಿ ೭೫ ಲಕ್ಷ ರೂಪಾಯಿಗಳ ನಷ್ಟವಾಗಿರುವುದು

ಶ್ರೀ ಆರ್. ವೆಂಕಟರಾವಯ್ಯ — ರಾಜಾಸ್ಥಾನದಲ್ಲಿ ಎನ್. ಜಿ. ಇ. ಎಫ್. ಸಂಸ್ಥೆಯವರು ರೆಕ್ಟಿಫೈಯರ್ ಸ್ಥಾಪಿಸುವ ಸಂದರ್ಭದಲ್ಲಿ ಕೆಟ್ಟ ತಂತ್ರಜ್ಞಾನದಿಂದಾಗಿ ೭೫ ಲಕ್ಷರೂಗಳ ನಷ್ಟ ಆಗಿರುವುದರ ಬಗ್ಗೆ ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿಗಳು).— ತಮ್ಮ ಅನುಮತಿಯನ್ನು ಪಡೆದು ಈ ಕೆಳಕಂಡ ಹೇಳಿಕೆಯನ್ನು ಕೊಡುತ್ತೇನೆ.

> "ಎನ್.ಜಿ.ಇ.ಎಫ್. ಬೆಂಗಳೂರು ಸಂಸ್ಥೆಯ ಮ್ಯಾನೇಜಿಂಗ್ ಡೈರೆಕ್ಟರ್ ಮತ್ತು ಅಧಿಕಾರಿಗಳು ರಾಜಾಸ್ಥಾನದಲ್ಲಿ ರೆಕ್ಟಿಫೈಯರ್ ಸ್ಥಾಪಿಸಿದ ಸಂದರ್ಭದಲ್ಲಿ ಕೆಟ್ಟ ತಂತ್ರಜ್ಞಾನದಿಂದಾಗಿ ೭೫ ಲಕ್ಷ ನಷ್ಟಕ್ಕೆ ಈಡು ಮಾಡಿರುವುದರಿಂದ ಉಂಟಾದ ಪರಿಸ್ಥಿತಿಯ ಬಗ್ಗೆ ಮಾನ್ಯ ಭಾರಿ ಕೈಗಾರಿಕಾ ಮಂತ್ರಿಗಳ ಗಮನ ಸೆಳೆಯುವುದು."

ಎನ್‌ಜಿಇಎಫ್ ೧೯೭೩ರ ವರೆಗೆ ಎಂಜಿ ಯೊಂದಿಗಿನ ಸಹಯೋಗದಲ್ಲಿ ಪಡೆದುಕೊಂಡ ತಂತ್ರಜ್ಞಾನವ ಆಧಾರದ ಮೇಲೆ ಇಂತಹ ಜಲಶೀತಿತ ರೆಕ್ಟಿಫೈಯರ್‌ಗಳನ್ನು ಕಾಸ್ಟಿಕ್ ಸೋಡಾ ಸ್ಥಾವರಗಳು ಗ್ರಾಫೈಟ್ ಮತ್ತು ಎಲೆಕ್ಟ್ರಾಲಿಸಿಸ್ ಸ್ಥಾವರಗಳಿಗೆ ೧೯೭೨ ರಿಂದ ಸರಬರಾಜು ಮಾಡಿದೆ. ಅನಂತರ ಎನ್‌ಜಿಇಎಫ್ ಯಾವುದೇ ಹೊಸ ವಿದೇಶಿ ಸಹಯೋಗ ಒಪ್ಪಂದಗಳಿಲ್ಲದೆ ಸ್ವಂತ ತಂತ್ರಜ್ಞಾನದ ಆಧಾರದ ಮೇಲೆ ಗುತ್ತಿಗೆಗಳ ನಿರ್ವಹಣೆಯನ್ನು ಮುಂದುವರಿಸಿದೆ. ಮೊದಲ ಸಹಯೋಗ ಏರ್ಪಾಟಿನ ಪ್ರಕಾರ ಎಂಜಿ ಯಿಂದ ಮಾಹಿತಿ ನೀಡಿಕೆ ೧೯೭೬ಕ್ಕೆ ಕೊನೆಗೊಂಡಿತು, ಆದರೆ ೧೯೮೧ರ ವೇಳೆಗೆ ವಿದ್ಯುತ್ ದರಗಳಲ್ಲಿ ತೀವ್ರ ಏರಿಕೆ ಹಾಗೂ ಶಕ್ತಿ ಗುಣಕಗಳ ಖಾತರಿ ನೀಡಿಕೆಯಂತ್ರ ದಂಡ ಉಸ ವಿಧಿಗಳ ಸಹಿತ ಗುತ್ತಿಗೆಗಳಲ್ಲಿ ನಿಗಧಿ ಪಡಿಸಿದ್ದರೂ ಕೂಡ. ಎನ್‌ಜಿಇಎಫ್ ಸಂಪೂರ್ಣವಾಗಿ ಸ್ವಂತ ತಂತ್ರಜ್ಞಾನದಿಂದ ಗುತ್ತಿಗೆಗಳನ್ನು ನಿರ್ವಹಿಸಿ ಸಾಕಷ್ಟು ಲಾಭವನ್ನು ಗಳಿಸುತ್ತಿದೆ. ೧೫ ಲಕ್ಷಕ್ಕೂ ಮೀರಿದ ರಾಯಲ್ಟಿ ನೀಡಿಕೆಯನ್ನು ಎನ್‌ಜಿಇಎಫ್ ೧೯೭೬ರ ನಂತರ ಸಂಪೂರ್ಣವಾಗಿ ನಿಲ್ಲಿಸಿದೆ

೧೯೮೧ ಮತ್ತು ೧೯೮೨ರಲ್ಲಿ ಅಸಮರ್ಪಕ ತಾಂತ್ರಿಕ ಮಾರ್ಗದರ್ಶನ ಹಾಗೂ ನಿರ್ದೇಶನದ ಕಾರಣ ಪರಿವರ್ತಕ ಕಾರ್ಖಾನೆಯು ರಾಜಾಸ್ಥಾನದಲ್ಲಿನ್ನೊಬ್ಬ ಗ್ರಾಹಕನಿಗೆ ಮೊದಲು ನಿರೀಕ್ಷಿಸಿದ್ದ ಶೇ. ೧೧ ಪ್ರತಿಭಾದೆ (ಇಂಪಿಡೆನ್ಸ್)ಯ ಬದಲಿಗೆ ಶೇ. ೧೨.೫೮ ಮತ್ತು ೧೩.೫ ಪ್ರತಿಭಾದೆಯ ಪರಿವರ್ತಕಗಳನ್ನು ನೀಡಲು ಸಾಧ್ಯವಾಯಿತು. ಇದರ ಪರಿಣಾಮವಾಗಿ ಸಂಪೂರ್ಣ ವ್ಯವಸ್ಥೆಯಲ್ಲಿ ಅಧಿಕ ವೋಲ್ಟೇಜು ಕುಸಿತ ಉಂಟಾಗಿ ಇದರಿಂದ ರೆಕ್ಟಿಫೈಯರ್ ಅಂತ್ಯಸ್ಥದಲ್ಲಿ ಏಸಿ ವೋಲ್ಟೇಜು ಕಡಿಮೆಯಾಯಿತು ತತ್ಪರಿಣಾಮವಾಗಿ ಡಿಸಿ ವೋಲ್ಟೇಜು ಕುಸಿತಗೊಂಡು ಇದರಿಂದ ಖಾತರಿ ನೀಡಿದ್ದ ೦.೯ ಶಕ್ತಿ ಗುಣಕದ ಬದಲಿಗೆ ೦.೮೧ ರಷ್ಟು ಕಡಿಮೆ ಶಕ್ತಿ ಗುಣಕ ಉಂಟಾಯಿತು ಗ್ರಾಹಕರು ಬಿಗಿಯಾದ ಬಟವಾಡೆ ಆನುಸೂಚಿಗೆ ಪ್ರತಿಯಾಗಿ ಹೂಡಿಕೆ ಭತ್ಯೆ ಸೌಲಭ್ಯವನ್ನು ಪಡೆದುಕೊಳ್ಳುವಲ್ಲಿ ತೀವ್ರ ಆಸಕ್ತಿ ಹೊಂದಿದ್ದರಿಂದ ಪರಿವರ್ತಕಗಳನ್ನು ನವೆಂಬರ್ ೧೯೮೨ ರಲ್ಲಿ ಮತ್ತು ಜನವರಿ ೧೯೮೩ ರಲ್ಲಿ ರವಾನೆ ಮಾಡಲಾಗಿತ್ತು.

ಭಾರೀ ಇಂಜಿನಿಯರಿಂಗ್ ಕೈಗಾರಿಕೆಯಲ್ಲಿ ಸಾಂಪ್ರಿಕ ತಯಾರಿಕಾ ದೋಷಗಳಿಂದ ಅಥವಾ ಸಾಗಣೆ ಹಾನಿಗಳಿಂದ ಉಂಟಾಗುವ ಸ್ಥಳದಲ್ಲಿಯೇ ಕೈಗೊಳ್ಳಬೇಕಾದ ದುರಸ್ತಿ ಕಾರ್ಯಗಳನ್ನು ಯಾವಾಗಲೂ ಗ್ರಾಹಕರ ತೃಪ್ತಿಗನುಗುಣವಾಗಿ ಸ್ಥಳದಲ್ಲಿಯೇ ಕೈಗೊಳ್ಳಲಾಗುವುದು. ಕಳೆದ ಎರಡು ದಶಕಗಳಿಗಿಂತಲೂ ಹೆಚ್ಚು ಕಾಲದಿಂದ ಎನ್‌ಜಿಇಎಫ್‌ಗೆ ಗ್ರಾಹಕರ ತೃಪ್ತಿಯೇ ಪ್ರಧಾನ ಆಂಶ. ಈ ಸಂದರ್ಭದಲ್ಲಿ ಎನ್‌ಜಿಇಎಫ್ ದಂಡ ಶುಲ್ಕವನ್ನು ತಪ್ಪಿಸಲು ಹಾಗೂ ಗ್ರಾಹಕರು ಪದೇ ಪದೇ ಉಂಟಾಗುವ ವಿದ್ಯುಚ್ಛಕ್ತಿ ಶುಲ್ಕ ದಂಡಗಳನ್ನು ಉಳಿತಾಯ ಮಾಡಲು ಸಾಧ್ಯವಾಗುವಂತೆ ಇಚ್ಛಿತ ಮಟ್ಟಗಳಿಗೆ ಶಕ್ತಿ ಗುಣಕವನ್ನು ಹೆಚ್ಚಿಸಲು ಅಗತ್ಯ ಸುಧಾರಕ (ಕೆಪಾಸಿಟರ್) ಬ್ಯಾಂಕ್‌ಗಳನ್ನು ಸ್ಥಳದಲ್ಲಿ ಒದಗಿಸಲಾಗಿತ್ತು.

ಗ್ರಾಹಕರು ಎನ್‌ಜಿಇಎಫ್‌ಗೆ ಪುನಃ ಅದೇ ಮಾತ್ರೊಂದು ಆದೇಶವನ್ನು ನೀಡಲು ಯೋಜಿಸಿದ್ದರು. ಆದರೆ ಕಾಸ್ಟಿಕ್ ಸೋಡಾ ಕೈಗಾರಿಕೆಯಲ್ಲಿ ತಲೆದೋರಿದ ಅನಿಶ್ಚಿತತೆಯಿಂದಾಗಿ ನಿರೀಕ್ಷಿತ ಆದೇಶಗಳು ಕೈಗೂಡಲಿಲ್ಲ ಈ ಆದೇಶದ ನಿರೀಕ್ಷೆಯಲ್ಲಿ ಖರೀದಿಸಿದ ಉಪಾಂಗಗಳನ್ನು ತದನಂತರ ಮದ್ರಾಸಿನ ಒಬ್ಬರು ಗ್ರಾಹಕರ ಹೊಸ ಆದೇಶಕ್ಕಾಗಿ ಬಳಸಿಕೊಳ್ಳಲಾಗಿತ್ತು. ಒಟ್ಟಿನಲ್ಲಿ ಈ ವ್ಯವಹಾರದಲ್ಲಿ, ಎನ್‌ಜಿಇಎಫ್ ಸಂಸ್ಥೆ ನಷ್ಟ ಅನುಭವಿಸಿಲ್ಲ. ಆದ್ದರಿಂದ ಕಂಪನಿಯ ವ್ಯವಸ್ಥಾಪಕ ನಿರ್ದೇಶಕರಾಗಲಿ ಅಥವಾ ಇತರ ಯಾವುದೇ ಅಧಿಕಾರಿಯನ್ನು ಹೊಣೆಗಾರರನ್ನಾಗಿ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಆರ್. ವೆಂಕಟರಾಮಯ್ಯ—ಸನ್ಮಾನ್ಯ ಅಧ್ಯಕ್ಷರೇ, ಇವರು ಒಪ್ಪಿಕೊಳ್ಳುತ್ತಾರೆ. ಎರಡನೆಯ ಮೂರನೆಯ ಪ್ಯಾರಾದಲ್ಲಿ ಸ್ವಲ್ಪ ಟೆಕ್ನಿಕಲ್ ಶಬ್ದಗಳನ್ನು ಉಪಯೋಗ ಮಾಡಿದ್ದಾರೆ. ಅದು ನನಗೆ ಅರ್ಥವಾಗುತ್ತಾ ಇಲ್ಲ. ವೋಲ್ಟೇಜ್ ಕುಸಿತಗೊಂಡಿತು, ಅದು ಇದು ಹೇಳಿದ್ದಾರೆ. ಕಡೆಯಲ್ಲಿ ಬಹಳ ಬುದ್ಧಿವಂತಿಕೆಯಿಂದ ಎನ್.ಜಿ.ಇ ಎಫ್.ನಲ್ಲಿ ನಷ್ಟ ಆಗಿಲ್ಲವೆಂದು ಹೇಳಿದ್ದಾರೆ. ತುಮಕೂರಿನ ಶ್ರೀ ಬಸವರಾಜ್ ಎಂ. ಪಿ. ಅವರು ಈ ಬಗ್ಗೆ ಪ್ರೆಸ್ ಸ್ಟೇಟ್‌ಮೆಂಟ್‌ನ್ನು ಕೊಟ್ಟು ೭೫ ಲಕ್ಷ ರೂಪಾಯಿಗಳ ನಷ್ಟ ಆಗಿದೆಯೆಂದು ಹೇಳಿದ್ದಾರೆ. ಡಿಫೆಕ್ಟ್ ಆಯಿತಂತ ನಿಜ. ಅದನ್ನು ನೀವು ಒಪ್ಪಿಕೊಳ್ಳುತ್ತೀರಿ. ಇದಂ ಏಕೆ ಆಯಿತು ? ಇದರಿಂದ ನಷ್ಟ ಆಗಲಿಲ್ಲವೇ ? ಗ್ರಾಹಕರ ಸಂತೃಪ್ತಿಗಾಗಿ ನಾವೇ ಹೋಗಿ ಅದನ್ನು ಸರಿಪಡಿಸಿದ್ದೇವೆ ಎಂದು ಹೇಳಿದ್ದಾರೆ. ಇದಕ್ಕೆ ಖರ್ಚಾಗಲಿಲ್ಲವೆ ? ನಾನು ಕೇಳಂವುದೇನೆಂದರೆ ತಂತ್ರಜ್ಞಾನ ಸರಿಯಾಗಿ ಇಲ್ಲದೆ ಈ ನಷ್ಟಕ್ಕೆ ಕಾರಣವಾಯಿತು. ಸಂಬಂಧಪಟ್ಟ

ಇಬ್ಬರು ಅಧಿಕಾರಿಗಳು ಶ್ರೀ ಶ್ರೀವಾತ್ಸವ ಮತ್ತು ಶ್ರೀ ಪ್ರಭಾಕರರಾವ್ ಇವರು ಸರ್ಕಾರಕ್ಕೆ ೭೫ ಲಕ್ಷ ರೂಪಾಯಿ ನಷ್ಟ ಆಗಲಿಕ್ಕೆ ಕಾರಣರಾಗಿದ್ದಾರೆ. ಈ ತಂತ್ರಜ್ಞಾನವನ್ನು ಸರಿಯಾಗಿ ನೋಡಿ ಕಳುಹಿಸಿದ್ದರೆ ಈ ಡಿಫೆಕ್ಟ್ ಬರುತ್ತಿರಲಿಲ್ಲ. ಇವರ ಬಗ್ಗೆ ಏಕೆ ಕ್ರಮ ತೆಗೆದುಕೊಂಡಿಲ್ಲ ? ಇಂತಹ ಪಬ್ಲಿಕ್ ಅಂಡರ್‌ಟೇಕಿಂಗ್‌ನಲ್ಲಿ ಇಂತಹ ಅಧಿಕಾರಿಗಳನ್ನು ಹತ್ತಾರು ವರ್ಷಗಳಿಂದ ಇಟ್ಟರೆ ಅವರು ಜೋಡಿದಾರರಂತೆ ವರ್ತಿಸಲು ಅವಕಾಶ ಕಲ್ಪಿಸಿಕೊಟ್ಟಂತೆ ಆಗುತ್ತದೆ. ತಾವು ನಡೆಸಿದ್ದೇ ದರ್ಬಾರು ಎನ್ನುವಂಥ ಪರಿಸ್ಥಿತಿ ಬರುವುದಿಲ್ಲವೇ ? ಇಂಥಾದನ್ನು ತಪ್ಪಿಸಿ, ನಾಲ್ಕೈದು ವರ್ಷ ಆಪ್ಷೇ ಅವರನ್ನು ಇಟ್ಟುಕೊಂಡು ಇನ್ನೊಂದು ಕೆಲಸಕ್ಕೆ ಹೋಗಿ ಎಂದು ಹೇಳಬೇಕು.

ಶ್ರೀ ಜೆ. ಹೆಚ್. ಪಟೀಲ್.—ಮೊದಲನೆಯದಾಗಿ ಈ ಎನ್.ಜಿ.ಇ.ಎಫ್. ಸಂಸ್ಥೆಯಿಂದ ವಾಟರ್ ಕೂಲರ್ ರೆಕ್ಟಿಫೈಯರ್ ಎಂದು ಎನ್ನುವ ಯಂತ್ರ, ಇದನ್ನು ಕಾಸ್ಟಿಕ್ ಸೋಡಾ ಮತ್ತು ಗ್ರಾಫೈಟ್ ಕಂಪನಿಯವರು ತೆಗೆದುಕೊಳ್ಳುತ್ತಾರೆ. ನಮಗೂ ಎ.ಇ.ಜಿ.ಗೂ ನಡೆದಂಥ ಟೆಕ್ನಾಲಜಿ ಟೈಅಪ್ ಆದಮೇಲೆ ನಾವೇ ಸ್ವತಃ ಎನ್‌ಜಿಇಎಫ್ ನಲ್ಲಿರತಕ್ಕಂಥ ತಂತ್ರಜ್ಞಾನದಿಂದ ಬೇರೆ ಕಡೆಗೆ ಮಾರಾಟ ಮಾಡುತ್ತಿದ್ದೇವೆ. ಈಗಲೂ ಆಷ್ಟೆ. ಈ ತಂತ್ರಜ್ಞಾನದಿಂದ ವಾಟರ್ ಕೂಲರ್ ರೆಕ್ಟಿಫೈಯರ್‌ಗಳನ್ನು ಸಪ್ಲೈ ಮಾಡುವಾಗ ಒಂದು ಪಾರ್ಟ್‌ನಲ್ಲಿ ಡಿಫೆಕ್ಟ್ ಇತ್ತು. ಈಗ ಸ್ಟಿಫ್ ಕಾಂಪಿಟೇಶನ್ ಇರುವುದರಿಂದ ಈ ಡಿಫೆಕ್ಟ್‌ನಿಂದ ಕಂಪನಿಯ ಹೆಸರು ಕೆಡಲು ಕಾರಣವಾಗಬಹುದು ಎಂದು ನಮ್ಮ ಖರ್ಚಿನಿಂದ ರಿಪೇರಿ ಮಾಡಿಕೊಟ್ಟಿದ್ದೇವೆ. ಎಲ್ಲಾ ದೇಶದಲ್ಲೂ, ಇಂಥ ಸಂಸ್ಥೆಗಳಲ್ಲಿ ಇರತಕ್ಕಂಥ ಪದ್ಧತಿ ಇದು. ಈ ರಿಪೇರಿ ಮಾಡಿಕೊಡದೇ ಹೋಗಿದ್ದರೆ ಎನ್‌ಜಿಇಎಫ್‌ನ ಡಿಫೆಕ್ಟೀವ್ ಮೆಶಿನ್ಸ್ ಇದ್ದರೆ ಲುಕ್ಸಾನು ಬಹಳ ಆಗುತ್ತಿತ್ತು. ರಿಪೇರಿಗೆ ಏನು ಖರ್ಚು ಮಾಡಿದ್ದೇವೆ, ಅದರ ಬದಲಿಗೆ ಒಟ್ಟು ವರ್ಷಕ್ಕೆ ೧೫ ಲಕ್ಷದಷ್ಟು ಎ.ಇ.ಜಿ. ಟೆಕ್ನಾಲಜಿಯಿಂದ ನಮಗೆ ಬರುತ್ತಿದೆ. ಇಂತಹ ದೊಡ್ಡ ಸಂಸ್ಥೆ, ೧೨೦ ಕೋಟಿ ಟರ್ನ್‌ಓವರ್ ಬಂದಿದೆ. ಈ ವರ್ಷ ಡಿವಿಡೆಂಡ್ ಹಂಚಿದ್ದೇವೆ. ಮಾನ್ಯ ಸದಸ್ಯರು ಕೆಲವೊಂದು ಸಿದ್ಧಾಂತದಲ್ಲಿ ನಂಬಿಕೆ ಇರತಕ್ಕಂಥವರು ಪಬ್ಲಿಕ್ ಅಂಡರ್ ಟೇಕಿಂಗ್ ನಮ್ಮದೇ ಇದ್ದು ಚೆನ್ನಾಗಿ ನಡೆಯುತ್ತಿರುವಾಗ ಒಳ್ಳೆಯ ಮಾತು ಹೇಳುವುದು ಬಿಟ್ಟು ಬಿಟ್ಟರು. ತುಮಕೂರು ಎಂ. ಪಿ. ಬಗ್ಗೆ ಹೇಳಿದರು.

೧-೩೦ ಪಿ. ಎಂ.

ತುಮಕೂರು ಎಂ.ಪಿ.ಯವರಿಗೆ ಸರಿಯಾದ, ಸೂಕ್ತವಾದ ಉತ್ತರಗಳನ್ನು, ಈ ಸಂಸ್ಥೆಯವರು ಕೊಟ್ಟಿದ್ದಾರೆ. ಆದ್ದರಿಂದ ಈ ತರಹದ ಮಾತು ನಮಗೆ ನಾವೇ ಕೆಡಿಸಿಕೊಂಡ ಹಾಗೆ ಆಗುತ್ತದೆ. ಮಾನ್ಯ ಸದಸ್ಯರಿಗೆ ಹೇಳುತ್ತೇನೆ, ಡಿಫೆಕ್ಟ್ ಇದ್ದದ್ದನ್ನು at our cost ಸರಿ ಮಾಡಿದ್ದೇವೆ. ಈ ರೀತಿ ಮಾಡಿದ್ದರಿಂದ ಈಗ ಸೇಲ್ ಇಂಪ್ರೂವ್ ಆಗಿದೆ. ಬೇರೆ ಕಂಪನಿಗಳಿಂದ ಆರ್ಡರ್ಸ್‌ಗಳು ಬರುತ್ತಿವೆ. We are making profit on that line. Regarding your allegations against two officers, I flatly, firmly deny such allegations.

ಶ್ರೀ ಆರ್. ವೆಂಕಟರಾಮಯ್ಯ.— ಒಂದು ವಿಷಯ, ಮಾನ್ಯ ಪಟೇಲರು ತುಂಬಾ ಬುದ್ಧಿವಂತಿಕೆಯಿಂದ, ಏನು ಹೇಳಬೇಕೋ ಅದನ್ನೇ ಬಿಟ್ಟಿದ್ದಾರೆ. ಎನ್.ಜಿ.ಇ.ಎಫ್.ನಿಂದ ಲಾಭ ಬರುತ್ತಿದೆ, ನೀವು ಬಂಡವಾಳ ಹಾಕಿದ್ದೀರಿ, ಒಳ್ಳೆಯ ವ್ಯಾಪಾರ ಆಗುತ್ತಿದೆ. We will thank them. ಅದನ್ನು ನಾನು ಹೇಳುವುದಿಲ್ಲ. ಇಷ್ಟು ಹೇಳಿದರೂ ಕೂಡ ಏನೋ ಡಿಫೆಕ್ಟ್ ಬಂತಂ, ಡಿಫೆಕ್ಟ್ ರೆಕ್ಟಿಫೈ ಮಾಡಿದ್ದೇವೆ. ಸಂಸ್ಥೆಗೆ ಒಳ್ಳೆಯ ಹೆಸರು ಬರಬೇಕೆಂಬುದನ್ನು ಒಪ್ಪಿಕೊಂಡಿದ್ದೇವೆ. ಅದರೆ ಈ ರೀತಿ ಡಿಫೆಕ್ಟ್ ಬರುವಂಥ ಮಿಷನರಿ ಕಳುಹಿಸಿದರಲ್ಲ, ಮೊದಲೇ ಏಕೆ ಚೆಕ್ ಮಾಡಿ ಕಳುಹಿಸಲಿಲ್ಲ. ಈ ಡಿಫೆಕ್ಟೀವ್ ಮಿಷನ್ ಕಳುಹಿಸಿದ್ದರಿಂದ ನಿಮಗೆ ಎಷ್ಟು ನಷ್ಟವಾಯಿತು ಎಂದು ಕೇಳಿದ್ದೀನಿ, ಇದನ್ನು ಬಿಟ್ಟು ಬಹಳ ಬುದ್ಧಿವಂತಿಕೆಯಿಂದ. ಮಿಕ್ಕಿದ್ದನ್ನೆಲ್ಲಾ ಹೇಳಿದ್ದೀರಿ.

ಶ್ರೀ ಜೆ. ಹೆಚ್. ಪಟೇಲ್.— ನಾನು ಡಿನೇ ಮಾಡಲಿಲ್ಲ. ಯಾವುದೇ ಸಂಸ್ಥೆ ಇಷ್ಟು ದೊಡ್ಡದಾಗಿ ವ್ಯವಹಾರ ಮಾಡಿದಾಗ, ಕೆಲವೊಂದು ದೋಷ ಆಗಬಹುದು. ಇಲ್ಲಿರತಕ್ಕ ಟೆಕ್ನಾಲಜಿ ನಮ್ಮದೇ, ನಮ್ಮ ಕಂಪನಿಯಲ್ಲಿದ್ದ ಇಂಜಿನಿಯರಂಗಳೇ ಇದನ್ನು ತಯಾರು ಮಾಡಿದ್ದುದು. ಆ ಒಂದು ಡಿಫೆಕ್ಟ್ ಇರತಕ್ಕದ್ದನ್ನು ನಾವು ಒಬ್ಬರಿಗೆ ಮಾರಾಟ ಮಾಡಿದ್ದೇವೆ. ಅವರು ಇಂತಹ ಡಿಫೆಕ್ಟ್ ಇದೆ ಎಂದರು. ಡಿಫೆಕ್ಟನ್ನು ನಮ್ಮ ಖರ್ಚಿನಲ್ಲೇ ತಯಾರು ಮಾಡಿಕೊಟ್ಟಿದ್ದೇವೆ. ಬೇಕಾದಷ್ಟು ಯೂನಿಟ್ಸ್

ನಾವು ಮ್ಯಾರಾಟ ಮಾಡಿದ್ದೇವೆ. ಒಂದು ಮಿಷನ್ ಯಾವುದೋ ಒಂದು ಪಾರ್ಟ್ಸ್ substitute ಮಾಡಿದ್ದೇವೆ ಎಂದರೆ ಇಡೀ ಕಂಪನಿಗೆ ಲುಕ್ಸಾನು ಆಗುತ್ತದೆ. ಇದಕ್ಕೆ ಒಂದಿಬ್ಬರು ಆಫೀಸರ್ಸ್ ಕಾರಣರು ಎನ್ನುವ Find devils all our surroundings ಈ ತರಹ ನಿಮ್ಮ ದೃಷ್ಟಿಯಲ್ಲಿ ಎಲ್ಲಾ ಕಡೆಯಲ್ಲೂ ದೆವ್ವಗಳನ್ನು ಕಾಣುತ್ತಾ ಇದ್ದರೆ ಅದಕ್ಕೆ ನಾವು ಏನು ಮಾಡುವುದಕ್ಕೆ ಸಾಧ್ಯವಾಗುತ್ತದೆ ?

ಶ್ರೀ ಆರ್. ವೆಂಕಟರಾಮಯ್ಯ.— ತಾವು ದೆವ್ವಗಳನ್ನು ಬೆಳಸುತ್ತಿದ್ದೀರಿ. ನೀವು ಒಳ್ಳೆಯವರನ್ನು ಅಪ್ರಿಷಿಯೇಟ್ ಮಾಡಿ ನಾನು ಅದನ್ನು ಕೇಳುವುದಿಲ್ಲ. ನವಂಗೆ ಬೇಕಾಗಿರುವುದು, ಈ ದೆವ್ವಗಳನ್ನು ಬೆಳೆಸುವುದು ಬೇಡ, ಭೂತಗಳಿಗೆ ಆಹಾರ ಕೊಡುವುದೂ ಬೇಡ. ಪಬ್ಲಿಕ್ ಅಂಡರ್ ಟೇಕಿಂಗ್ಸ್‌ನಲ್ಲಿ ೩೦ ಕೋಟಿ ರೂಪಾಯಿಗಳು ನಷ್ಟವಾಗಿದೆ. ಈ ಭೂತಗಳು ನುಂಗಿವೆ, ಈ ಭೂತಗಳನ್ನು ಏಕೆ ಬೆಳೆಸುತ್ತಿದ್ದೀರಿ ? ಅದಕ್ಕೋಸ್ಕರ ನಾನು ಕೇಳಿದ್ದುದು ಈ ಡಿಫೆಕ್ಟೀವ್ ಮಿಷನ್‌ನಿಂದ ಎಷ್ಟು ನಷ್ಟವಾಯಿತು ? ಯಾರು ಈ ಮಿಷನ್ ಕಳುಹಿಸಿದ್ದುದು ? ಇದನ್ನು ಪರೀಕ್ಷೆ ಮಾಡದೇ ಏಕೆ ಕಳುಹಿಸಿದರು ? ಇಂತಹ ಆಫೀಸರ್ ಮೇಲೆ ಏಕೆ ಕ್ರಮ ತೆಗೆದುಕೊಳ್ಳುವುದಿಲ್ಲ ? ಎಷ್ಟು ನಷ್ಟವಾಗಿದೆ ಎಂಬುದನ್ನು ಸ್ಪಷ್ಟವಾಗಿ ಹೇಳಿ ?

ಶ್ರೀ ಜೆ. ಹೆಚ್. ಪಟೇಲ್.— ನಾನು ಹೇಳಿದ್ದೇನೆ, ಈ ತರಹದ ಸಣ್ಣ ಸಣ್ಣ ಯಾಂತ್ರಿಕ ತೊಂದರೆಗಳು ಪ್ರತಿಯೊಂದು ಕಾರ್ಖಾನೆಗಳಲ್ಲೂ ಬರುತ್ತವೆ. ಇದನ್ನು ಕಂಡುಹಿಡಿದು, ಇದನ್ನು ಸರಿಪಡಿಸಿದ ಮೇಲೆ, ನಾವು ಈಗಾಗಲೇ ಬೇರೆ ಯೂನಿಟ್ಸ್ ಕೊಟ್ಟಿದ್ದೇವೆ. All of them are running well. ಆದ್ದರಿಂದ, ಆ ಇಂಜಿನಿಯರುಗಳು ಯಾರು, ಏಕೆ ತಪ್ಪು ಮಾಡಿದ್ದಾರೆಂದು ಕೇಳಿದರೆ ಹೇಗೆ ? ಮಾನ್ಯ ಅಧ್ಯಕ್ಷರೇ, ಈ ದೋಷವನ್ನು ಸರಿಪಡಿಸಿ ಆಗಿದೆ. ಈಗ ಎಲ್ಲೂ ಕಂಪ್ಲೇಂಟ್ ಇಲ್ಲ. ಯಾವ ಅಧಿಕಾರಿಗಳು ಇದಕ್ಕೆ ಹೊಣೆ, ಎಲ್ಲಿಂದ ಬಂದರು, ಎಂಬುದಕ್ಕೆಲ್ಲಾ ಉತ್ತರ ಹೇಳುವುದು ಇಲ್ಲಿ ಅಪ್ರಕೃತ. ಸಮಯ ಬಂದಲ್ಲಿ ಯಾವುದಾದರೂ ಅಧಿಕಾರಿ ವರ್ತನೆಯಿಂದ ಸಂಸ್ಥೆಗೆ ಹಾನಿ ಆಗುವುದಾದರೆ ಸರ್ಕಾರ ಕ್ರಮ ಕೈಗೊಳ್ಳುತ್ತದೆ.

ನಿಯಮ ೩೩ಳಿರ ಮೇರೆಗೆ

೧. ದಕ್ಷಿಣ ಕನ್ನಡದ ಪಂಲೆನಾಡು ಪ್ರದೇಶಗಳಲ್ಲಿ ಕಾಡನ್ನು ಸಂರಕ್ಷಿಸುವುದು

ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).— ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡದ ಪಂಲೆನಾಡು ಪ್ರದೇಶದಲ್ಲಿ, ಪಶ್ಚಿಮ ಘಟ್ಟಗಳ ತಪ್ಪಲಲ್ಲಿ "ಪಶ್ಚಿಮ ಘಟ್ಟ ಉಳಿಸಿ" ಎಂಬ ವಿಚಾರದ ಪಾದಯಾತ್ರೆ ಕಳೆದ ಒಂದೆರಡು ತಿಂಗಳುಗಳ ಹಿಂದೆ ಯಶಸ್ವಿಯಾಗಿ ನಡೆದಿದೆಯಷ್ಟೆ. ಅರಣ್ಯ ಸಂಪತ್ತು ನಾಶವಾಗಬಾರದು, ಅರಣ್ಯದ ನಾಶವಾಗಬಾರದು, ಈಗಾಗಲೇ ಅರಣ್ಯ ಸಂಪೂರ್ಣವಾಗಿ ನಾಶವಾಗುತ್ತಾ ಬಂದು ಹಸಿರು ಮಾಯವಾಗುತ್ತಿದೆ ಆದ ಕಾರಣ ಪಶ್ಚಿಮ ಘಟ್ಟಗಳ ಅರಣ್ಯಗಳ ಸಂರಕ್ಷಣೆ ಮಾಡ ಬೇಕು. ಕಾಡು ನಾಶದಿಂದ ಮಳೆ, ಬೆಳೆ ಎಲ್ಲವೂ ಸಂಪೂರ್ಣವಾಗಿ ಕುಂಠಿತವಾಗುತ್ತದೆ. ಹೀಗಿರುವುದರಿಂದ ಪಶ್ಚಿಮ ಘಟ್ಟಗಳನ್ನು ವನ ಸಂಪತ್ತನ್ನು ಕಾಡು ಕಳ್ಳರಿಂದ ರಕ್ಷಿಸಬೇಕು. ಜನತೆಯನ್ನು ಕಾಪಾಡ ಬೇಕು. ಇದು ಪಶ್ಚಿಮ ಘಟ್ಟ ಉಳಿಸಿ, ಪಾದಯಾತ್ರೆಯವರ ಉದ್ದೇಶ, ಈ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ? ಪಾದಯಾತ್ರಿಗಳ ಬಯಕೆಯಂತೆ ಅರಣ್ಯ ನಾಶವನ್ನು ಸಂಪೂರ್ಣವಾಗಿ ನಿಲ್ಲಿಸಿ, ಅರಣ್ಯ ಸಂಪತ್ತನ್ನು ರಕ್ಷಿಸಲು ಸರಕಾರ ತೆಗೆದುಕೊಂಡ ಕಾರ್ಯಕ್ರಮಗಳೇನು ? ಅರಣ್ಯ ಸಚಿವರ ಗಮನವನ್ನು ಈ ಬಗ್ಗೆ ಸೆಳೆಯುತ್ತೇನೆ.

ಶ್ರೀ ಜೆ. ಎಸ್. ಬಾಗಲಕೋಟೆ (ರಾಜ್ಯ ಅರಣ್ಯ ಮಂತ್ರಿಗಳು).— ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಇದಿನಬ್ಬ ಅವರು ನಿಯಮ ೩೩ಳಿರ ಮೇರೆಗೆ ಪ್ರಸ್ತಾಪ ಮಾಡಿರುವ ಸೂಚನೆಗೆ ಈ ಕೆಳಕಂಡಂತೆ ನನ್ನ ಹೇಳಿಕೆಯನ್ನು ನೀಡಲು ತಮ್ಮ ಅನುಮತಿಯನ್ನು ಕೋರುತ್ತೇನೆ.

"ಪಶ್ಚಿಮ ಘಟ್ಟ ಉಳಿಸಿ ಕಾಲ್ನಡಿಗೆ" ಸಂಘಟನೆಯ ರಾಜ್ಯದ ಪ್ರತಿನಿಧಿ ಈ ಕಾಲ್ನಡಿಗೆ ಬಗ್ಗೆ ಅರಣ್ಯ ಇಲಾಖೆಗೆ ತಿಳಿಸಿದ್ದಾರೆ. ಇದರಲ್ಲಿ ಅರಣ್ಯ ಅಧಿಕಾರಿಗಳು ಭಾಗವಹಿಸುವಂತೆ ಅವರು ಕೋರಿದ್ದರು. ಸರ್ಕಾರದ ಅರಣ್ಯ ಕಾರ್ಯ ನೀತಿಯನ್ನು ಅರಣ್ಯ ಕಾಮಗಾರಿಯಲ್ಲಿ ಅನುಸರಿಸುತ್ತಿರುವ